ಶ್ರೀ ಕಾಗೋಡು ತಿಮ್ಮಪ್ಪ :— ಈ ಪ್ರಶ್ನೆ ಇದಕ್ಕೆ ಸಂಬಂಧಪಡುವುದಿಲ್ಲ. ಆದರೂ ಕೂಡ, ಮಾನ್ಯ ಸದಸ್ಯರು ಹೇಳಿದ ರೀತಿಯಲ್ಲಿ ಡ್ರಗ್ ಕಂಟ್ರೋಲ್ ಕಛೇರಿಯಲ್ಲಿ ಅಂಥ ಅಕ್ರಮಗಳು ನಡೆಯುತ್ತಿದ್ದರೆ ಸರ್ಕಾರ ಅದರ ಬಗ್ಗೆ ಖಂಡಿತವಾಗಿಯೂ ವಿಚಾರಣೆ ಮಾಡುತ್ತದೆ.

ಕಳೆದ 2 ವರ್ಷಗಳಿಂದ ನಗರ, ಜಿಲ್ಲಾ ಮತ್ತು ಗ್ರಾಮೀಣ ಆಸ್ಪತ್ರೆಗಳ ಅಭಿವೃದ್ಧಿಗಾಗಿ ಮಾಡಿರುವ ವೆಚ್ಚ.

418(3788) ಶ್ರೀ ಎನ್. ಯೋಗೀಶ ಭಟ್ (ಮಂಗಳೂರು) :— ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ) ರಾಜ್ಯದಲ್ಲಿ ನಗರ, ಜಿಲ್ಲಾ ಮತ್ತು ಗ್ರಾಮೀಣ ಆಸ್ಪತ್ರೆಗಳ ಅಭಿವೃದ್ಧಿಗೆ ವಿಶ್ವಬ್ಯಾಂಕು ಹಾಗೂ ರಾಜ್ಯ ಸರಕಾರದ ನೆರವಿನಿಂದ 1998-99 ಮತ್ತು 1999-2000 ರಲ್ಲಿ ಮಾಡಿದ ವೆಚ್ಚ ಎಷ್ಟು ಹಾಗೂ ಆಗಿರುವ ಅಭಿವೃದ್ಧಿ ಎಷ್ಟು?

ಆ) ಮಂಗಳೂರಿನ ಜಿಲ್ಲಾ ಆಸ್ಪತ್ರೆಗಳಾದ ವೆನ್‌ಲಾಕ್ ಲೇಡಿ ಗೋಷನ ಆಸ್ಪತ್ರೆಗಳ ಅಭಿವೃದ್ಧಿಗೆ 1998-99 ಮತ್ತು 1999-2000 ರಲ್ಲಿ ಮಾಡಿದ ವೆಚ್ಚ ಎಷ್ಟು ಅಭಿವೃದ್ಧಿಗೆ ಹಾಕಿಕೊಂಡಿರುವ ಯೋಜನೆಗಳು ಯಾವುವು ಕೊರತೆಯಿಂದ ಸಿಬ್ಬಂದಿಗಳ ದಾದಿಯರ, ಫಾರ್ಮಸಿಸ್ಟ್‌ರನ್ನು ನೇಮಕ ಮಾಡಲು ಇಲಾಖೆ ಕೈಗೊಂಡ ಕ್ರಮಗಳೇನು?

ಡಾ: ಎ.ಬಿ. ಮಾಲಕರೆಡ್ಡಿ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು) :—

ಅ) ವಿಶ್ವಬ್ಯಾಂಕ್ ನೆರವಿನ ಕರ್ನಾಟಕ ಆರೋಗ್ಯ ವ್ಯವಸ್ಥೆಗಳ ಅಭಿವೃದ್ಧಿ ಯೋಜನೆಯಡಿ ರಾಜ್ಯದಲ್ಲಿಯ ಒಟ್ಟು 230 ಆಸ್ಪತ್ರೆಗಳನ್ನು ಅಭಿವೃದ್ಧಿ ಪಡಿಸಲಾಗುತ್ತಿದ್ದು 1998-99ನೇ ಸಾಲಿನಲ್ಲಿ ರೂ. 95.18 ಕೋಟಿಗಳನ್ನು ಮತ್ತು 1999-2000 ಸಾಲಿನಲ್ಲಿ ರೂ. 121.05 ಕೋಟಿಗಳನ್ನು ವೆಚ್ಚ ಮಾಡಲಾಗಿದೆ.

ಇದುವರೆಗೆ 60 ಆಸ್ಪತ್ರೆಗಳ ಸಿವಿಲ್ ಕಾಮಗಾರಿಯು ಪೂರ್ಣಗೊಂಡಿದ್ದು ಕಾರ್ಯನಿರ್ವಹಿಸಲು ಇಲಾಖೆಗೆ ವಹಿಸಿಕೊಡಲಾಗಿದೆ. ಹಾಗೂ ಮಾರ್ಚ್ 2001ರ ಅಂತ್ಯಕ್ಕೆ ಒಟ್ಟು 125 ಆಸ್ಪತ್ರೆ ಕಾಮಗಾರಿಯನ್ನು ಪೂರ್ಣಗೊಳಿಸಲು ಕಾರ್ಯಕ್ರಮ ಹಾಕಿಕೊಳ್ಳಲಾಗಿದೆ.

ವಿಶ್ವಬ್ಯಾಂಕ್ ನೆರವಿನ ಭಾರತ ಜನಸಂಖ್ಯೆ ಯೋಜನೆ-9(ಕ) ಯೋಜನೆಯಡಿ ಗ್ರಾಮೀಣ ಪ್ರದೇಶಗಳಲ್ಲಿ ಉಪ ಕೇಂದ್ರಗಳ ಕಟ್ಟಡಗಳು, ಪ್ರಾಥಮಿಕ ಆರೋಗ್ಯ ಕೇಂದ್ರಗಳು ಹಾಗೂ ಜಿಲ್ಲಾ ತರಬೇತಿ ಕೇಂದ್ರಗಳ ಕಟ್ಟಡಗಳ ನಿರ್ಮಾಣಕ್ಕಾಗಿ 1998-99ನೇ

ಸಾಲಿನಲ್ಲಿ ರೂ.1,636/- ಲಕ್ಷಗಳನ್ನು ಮತ್ತು 1999-2000ನೇ ಸಾಲಿನಲ್ಲಿ ರೂ. 1,510/- ಲಕ್ಷ ರೂಗಳನ್ನು ವೆಚ್ಚ ಮಾಡಲಾಗಿದೆ.

ಭಾರತ ಜನಸಂಖ್ಯೆ ಯೋಜನೆ-9(ಕ) ಅಡಿಯಲ್ಲಿ ಉಪಕೇಂದ್ರಗಳು-598, ಪ್ರಾಥಮಿಕ ಆರೋಗ್ಯ ಕೇಂದ್ರಗಳು-63, ವೈದ್ಯಾಧಿಕಾರಿಗಳ ವಸತಿಗೃಹ-181, ಜಿಲ್ಲಾ ತರಬೇತಿ ಕೇಂದ್ರ-14 ದಾದಿಯರ ತರಬೇತಿ ಕೇಂದ್ರ-05 ಈ ಕಾಮಗಾರಿಗಳನ್ನು ಪೂರ್ಣಗೊಳಿಸಲಾಗಿದೆ.

ವಿಶ್ವಬ್ಯಾಂಕ್ ನೆರವಿನ IPP-VIIIರ ಯೋಜನೆಯಡಿಯಲ್ಲಿ ಆರೋಗ್ಯ ಕೇಂದ್ರಗಳ ನಿರ್ಮಾಣ, ಸಿಬ್ಬಂದಿಗಳ ವಸತಿಗೃಹಗಳು ಹಾಗೂ ತರಬೇತಿ ಕೇಂದ್ರಗಳ ನಿರ್ಮಾಣವನ್ನು ಬೆಂಗಳೂರು ನಗರದಲ್ಲಿ ತೆಗೆದುಕೊಳ್ಳಲಾಗಿದೆ. 1998-99 ಸಾಲಿನಲ್ಲಿ 1176.36 ಲಕ್ಷ ರೂಗಳನ್ನು ಹಾಗೂ 1999-2000 ಸಾಲಿನಲ್ಲಿ 1133.29 ಲಕ್ಷ ರೂಗಳನ್ನು ವೆಚ್ಚ ಮಾಡಲಾಗಿದೆ. ಈ ಯೋಜನೆಯಡಿ 63 ಆರೋಗ್ಯ ಕೇಂದ್ರಗಳನ್ನು, 5 ವಸತಿಗೃಹಗಳನ್ನು ಹಾಗೂ 1 ತರಬೇತಿ ಕೇಂದ್ರಗಳನ್ನು ಪೂರ್ಣ ಗೊಳಿಸಲಾಗಿದೆ.

ಅ) ಮಂಗಳೂರಿನ ವೆನಲಾಕ್ ಆಸ್ಪತ್ರೆ ಮತ್ತು ಲೇಡಿ ಗೋಷನ್ ಆಸ್ಪತ್ರೆ ಕಾಮಗಾರಿಗಳನ್ನು ಕ್ರಮವಾಗಿ ಜುಲೈ 2000 ಮತ್ತು ಸೆಪ್ಟೆಂಬರ್ 2000ರಲ್ಲಿ ಪ್ರಾರಂಭಿಸಲಾಗಿದೆ. 1998-99 ಮತ್ತು 1999-2000 ಸಾಲುಗಳಲ್ಲಿ ಈ ಎರಡು ಆಸ್ಪತ್ರೆಗಳ ಕಾಮಗಾರಿಗೆ ಯಾವುದೇ ವೆಚ್ಚವಾಗಿರುವುದಿಲ್ಲ. ವೆನಲಾಕ್ ಆಸ್ಪತ್ರೆಯ ನವೀಕರಣ ಮೆರ್ಟನಿಟಿ ವಾರ್ಡ್, ಅಪಘಾತ ವಿಭಾಗ, ಜನರೇಟರ್ ಕೋಟಿ ನಿರ್ಮಾಣ, ನೀರು ಸರಬರಾಜು ವಿದ್ಯುಚ್ಛಕ್ತಿ ವ್ಯವಸ್ಥೆ ದುರಸ್ತಿ ಕಾಮಗಾರಿಗಳು ಇತ್ಯಾದಿ ಅಭಿವೃದ್ಧಿ ಕಾರ್ಯಗಳು ಸೇರಿವೆ. ಲೇಡಿ ಫೋಷನ್ ಆಸ್ಪತ್ರೆಯ ನವೀಕರಣ, ವಿಸ್ತರಣೆ, ನೌಕರರ ಮತ್ತು ದಾದಿಯರ ವಸತಿಗೃಹಗಳ ನಿರ್ಮಾಣ, ಕಾಂಪೌಂಡ್ ಗೋಡೆ ನಿರ್ಮಾಣ, ನೀರು ಸರಬರಾಜು, ವಿದ್ಯುತ್ ವ್ಯವಸ್ಥೆ ದುರಸ್ತಿ ಕಾಮಗಾರಿಗಳು ಇತ್ಯಾದಿ ಅಭಿವೃದ್ಧಿ ಕಾರ್ಯಗಳಲ್ಲಿ ಸೇರಿದೆ.

ಶ್ರೀ ಎನ್. ಯೋಗೀಶ್ ಭಟ್ :— ಮಾನ್ಯ ಅಧ್ಯಕ್ಷರೇ, ರಾಜ್ಯಾದ್ಯಂತ ಇರುವ ಆಸ್ಪತ್ರೆಗಳ ನವೀಕರಣಕ್ಕಾಗಿ ವಿಶ್ವ ಬ್ಯಾಂಕಿನ ನೆರವಿನಿಂದ ಕಳೆದ ಎರಡು ವರ್ಷಗಳಲ್ಲಿ 216 ಕೋಟಿ ರೂಪಾಯಿಗಳನ್ನು ವೆಚ್ಚ ಮಾಡಲಾಗಿದೆ ಎಂದು ಸರ್ಕಾರದವರು ಹೇಳಿದ್ದಾರೆ. ಇಲ್ಲಿ ಆಗುವಂಥ ಕಟ್ಟಡ ಕಾಮಗಾರಿಗಳ ಉಸ್ತುವಾರಿಯನ್ನು ನೋಡಲು ಯಾವುದಾದರೂ ಇಂಜಿನಿಯರಿಂಗ್ ಸೆಕ್ಷನ್ ಇದೆಯೇ ಎಂದು ಕೇಳುತ್ತಿದ್ದೇನೆ. ಅವುಗಳ ಗುಣಮಟ್ಟವನ್ನು ಕಾಪಾಡುವ ನಿಟ್ಟಿನಲ್ಲಿ ಏನು ವ್ಯವಸ್ಥೆ ಮಾಡಿಲಾಗಿದೆ ಮತ್ತು ಆ ಕಾಮಗಾರಿಗಳ ಉಸ್ತುವಾರಿ ಮಾಡುವ ಜವಾಬ್ದಾರಿಯನ್ನು ಯಾರಿಗೆ ವಹಿಸಲಾಗಿದೆ. ಈ ಬಗ್ಗೆ ಆಕೌಂಟಬಿಲಿಟಿ, ಡ್ಯೂರಬಿಲಿಟಿ ಫಿಕ್ಸ್ ಮಾಡುವಂಥ ಜವಾಬ್ದಾರಿಯನ್ನೇನಾದರೂ ವಹಿಸಲಾಗಿದೆಯೇ ಎಂದು

ಕೇಳುತ್ತಿದ್ದೇನೆ.

ಶ್ರೀ ಹಾಗೋಡು ತಿಮ್ಮಪ್ಪ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರ ಪರವಾಗಿ) :— ಮಾನ್ಯ ಅಧ್ಯಕ್ಷರೇ, ವಿಶ್ವಬ್ಯಾಂಕಿನ ನೆರವಿನಿಂದ ನಡೆಸತಕ್ಕಂಥ ಕಾಮಗಾರಿಗಳನ್ನು ಕರ್ನಾಟಕ ಆರೋಗ್ಯ ವ್ಯವಸ್ಥೆಗಳ ಅಭಿವೃದ್ಧಿ ನಿಗಮದಲ್ಲಿನ ಇಂಜಿನಿಯರುಗಳ ಮುಖಾಂತರ ಗುಣಮಟ್ಟವನ್ನು ಪರೀಕ್ಷೆ ಮಾಡಿಯೇ ಹಣವನ್ನು ಪಾವತಿ ಮಾಡುತ್ತಿದ್ದೇವೆ. ಆದ್ದರಿಂದ, ಇಲ್ಲಿ ಗುಣಮಟ್ಟಕ್ಕೆ ಯಾವುದೇ ರೀತಿಯ ಲೋಪವಾಗಿಲ್ಲ.

ಶ್ರೀ ಎನ್. ಯೋಗೀಶ್ ಭಟ್ :— ಆದರೂ ಕೂಡ ಥರ್ಡ್ ಪಾರ್ಟಿಯಿಂದ ಈ ಕಾಮಗಾರಿಗಳನ್ನು ಇನ್ಸ್‌ಪೆಕ್ಷನ್ ಮಾಡಿಸುವಂಥ ಅವಶ್ಯಕತೆ ಇದೆ ಎಂದು ನಾನು ತಮ್ಮ ಮೂಲಕ ಒತ್ತಾಯ ಮಾಡುತ್ತಿದ್ದೇನೆ. ಎರಡನೆಯದಾಗಿ, ಮಂಗಳೂರಿನ ವೆನ್‌ಲಾಕ್ ಮತ್ತು ಲೇಡಿ ಗೋಷನ್ ಆಸ್ಪತ್ರೆಗಳ ನವೀಕರಣಕ್ಕಾಗಿ ಎಷ್ಟು ಹಣವನ್ನು ಇಡಲಾಗಿದೆ ಎನ್ನುವ ಮಾಹಿತಿ ಬೇಕು.

ಶ್ರೀ ಹಾಗೋಡು ತಿಮ್ಮಪ್ಪ :— ವೆನ್‌ಲಾಕ್ ಆಸ್ಪತ್ರೆಗೆ ಒಂದು ಕೋಟಿ 55 ಲಕ್ಷ ಮತ್ತು ಲೇಡಿ ಗೋಷನ್ ಆಸ್ಪತ್ರೆಗೆ ಒಂದು ಕೋಟಿ 83 ಲಕ್ಷಗಳನ್ನು ಇಡಲಾಗಿದೆ.

ಶ್ರೀ ಎನ್. ಯೋಗೀಶ್ ಭಟ್ :— ಅಲ್ಲಿ ಖಾಸಗಿ ದಾನಿಗಳ ನೆರವಿನಿಂದ ಬರ್ನ್ ಸೆಂಟರ್ ಅನ್ನು ಮಾಡಲಾಗಿದೆ. ಹಲವು ಲಕ್ಷ ರೂಪಾಯಿಗಳನ್ನು ಖರ್ಚು ಮಾಡಿ ಅದನ್ನು ಕಟ್ಟಲಾಗಿದ್ದರೂ, ನಾವು ಇವತ್ತಿಗೂ ಅದನ್ನು ರನ್ ಮಾಡುವ ಸ್ಥಿತಿಯಲ್ಲಿ ಇಲ್ಲ. ಈ ಬಗ್ಗೆ ನಾನು ಪದೇಪದೇ ಸರ್ಕಾರದ ಗಮನ ಸೆಳೆದಿದ್ದೇನೆ. ಅಲ್ಲಿ ಡಯಾಲಿಸಿಸ್ ಸೆಂಟರ್ ಇದೆ. ಅದನ್ನು ರನ್ ಮಾಡಲು ಆಗುತ್ತಿಲ್ಲ. ಕನಿಷ್ಟವಾಗಿ ಅಲ್ಲಿಗೆ ಬೇಕಾಗಿರುವಂಥ 64 ಸ್ಟಾಫ್ ನರ್ಸ್‌ಗಳನ್ನು ಕೊಡಬೇಕು ಎಂದು ಕಳೆದ ಒಂದು ವರ್ಷದಿಂದಲೂ ಒತ್ತಾಯ ಮಾಡುತ್ತಿದ್ದೇನೆ. ಆದರೆ ಇವತ್ತಿನವರೆಗೂ ಅವರನ್ನು ಕೊಡದೇ ಇರುವುದರಿಂದ, ಈ ಆಸ್ಪತ್ರೆಗಳಿಗೆ ಹೊಸ ಫ್ಯಾಕಲ್ಟಿಗಳು ಬಂದರೂ ಕೂಡ ಅವುಗಳನ್ನು ಉಪಯೋಗ ಮಾಡಲಾಗದಂಥ ದುಸ್ಥಿತಿ ಬಂದಿದೆ. ಆ ಫೈಲ್ ಮುಖ್ಯ ಕಾರ್ಯದರ್ಶಿಗಳ ಹಂತದಲ್ಲಿ ಪೆಂಡಿಂಗ್ ಇದೆ ಎನ್ನುವುದು ನಮ್ಮ ಗಮನಕ್ಕೆ ಬಂದಿದೆ. ತಾವು ತಕ್ಷಣ ಅದನ್ನು ರಿಲೀಸ್ ಮಾಡಬೇಕು ಎಂದು ನಾನು ತಮ್ಮ ಮೂಲಕ ಒತ್ತಾಯ ಮಾಡುತ್ತಿದ್ದೇನೆ. ಈ ಬಗ್ಗೆ ಮಾನ್ಯ ಮುಖ್ಯಮಂತ್ರಿಗಳ ಮತ್ತು ಮುಖ್ಯಕಾರ್ಯದರ್ಶಿಗಳ ಗಮನವನ್ನೂ ಕೂಡ ಸೆಳೆದಿದ್ದೇನೆ. ಮತ್ತು ಅಲ್ಲಿ ಲ್ಯಾಬೊರೇಟರಿ ಟೆಕ್ನೀಷಿಯನ್, ಫಾರ್ಮಸಿಸ್ಟ್, ಸ್ಟಾಫ್ ನರ್ಸ್, ವೈದ್ಯರುಗಳ ಕೊರತೆ ಇದೆ. ಕನಿಷ್ಟವೆಂದರೆ, ಕೂಡಲೇ 64 ದಾದಿಯರ ನೇಮಕಾತಿಗೆ ಸರ್ಕಾರ ಮಂಜೂರಾತಿಯನ್ನು ಕೊಡಬೇಕು ಎನ್ನುವ ವಿನಂತಿಯನ್ನು ಮಾಡುತ್ತಿದ್ದೇವೆ.

ಶ್ರೀ ಕಾಗೋಡು ತಿಮ್ಮಪ್ಪ :— ವೇಕೆನ್ಸಿಗಳನ್ನು ಕ್ರಿಯೇಟ್ ಮಾಡಲಾಗಿರುವಂಥ ಕಡೆಗಳಲ್ಲಿ ವೈದ್ಯರುಗಳನ್ನು ಮತ್ತು ನರ್ಸ್‌ಗಳನ್ನು ತುಂಬತಕ್ಕಂಥ ಕೆಲಸ ಮಾಡುತ್ತಿದ್ದೇವೆ. ಇನ್ನೂ ಸ್ವಲ್ಪ ಬಾಕಿ ಇದೆ. ಆದರೆ ಇಲ್ಲಿ ತೊಂದರೆ ಬಂದಿರುವುದು ಏನೆಂದರೆ, ಆಸ್ಪತ್ರೆಗಳ ಬೆಡ್ ಸ್ಟ್ರೆಂಥ್‌ಗೆ ಅನುಗುಣವಾಗಿ ವೇಕೆನ್ಸಿಗಳ ಸೃಷ್ಟಿಯಾಗಿಲ್ಲ. ಬೆಡ್ ಸ್ಟ್ರೆಂಥ್‌ಗೆ ಅನುಗುಣವಾಗಿ ವೇಕೆನ್ಸಿಗಳನ್ನು ಕ್ರಿಯೇಟ್ ಮಾಡಬೇಕು ಎನ್ನುವ ಪ್ರಸ್ತಾವನೆ ಮಂತ್ರಿಮಂಡಲದ ಮುಂದೆ ಇದ್ದು, ಆದಷ್ಟು ಬೇಗ ಅದನ್ನು ತೀರ್ಮಾನ ಮಾಡುತ್ತೇವೆ ಮತ್ತು ಅಗತ್ಯವಾದಂಥ ವೈದ್ಯರುಗಳನ್ನು ಮತ್ತು ನರ್ಸ್‌ಗಳನ್ನು ನೇಮಕ ಮಾಡುತ್ತೇವೆ.

ಶ್ರೀ ಎನ್. ಯೋಗೀಶ್ ಭಟ್ :— ಇಡೀ ರಾಜ್ಯದಲ್ಲಿರುವ ಎಲ್ಲಾ ಆಸ್ಪತ್ರೆಗಳಿಗೆ ಒಟ್ಟಿಗೇ ನೇಮಕಾತಿ ಮಾಡುವುದಾಗಿ ಹೇಳುತ್ತಿದ್ದಾರೆ. ಕನಿಷ್ಟ ಮಂಗಳೂರಿನ ವೆನ್‌ಲಾಕ್ ಮತ್ತು ಲೇಡಿ ಗೋಷನ್ ಆಸ್ಪತ್ರೆಗಳ ಸಂಬಂಧಪಟ್ಟಿದ್ದಾದರನ್ನೂ ತಕ್ಷಣ ಮಂಜೂರು ಮಾಡಬೇಕು ಎಂದು ವಿನಂತಿ ಮಾಡುತ್ತಿದ್ದೇನೆ. ಏಕೆಂದರೆ, ಇಲ್ಲಿ 64 ಸ್ಟಾಫ್ ನರ್ಸ್‌ಗಳ ಅವಶ್ಯಕತೆ ಇದೆ ಎಂದು ಕೆ.ಹೆಚ್.ಎಸ್.ಡಿ.ಬಿ.ಯವರೇ ಶಿಫಾರಸ್ಸು ಮಾಡಿದ್ದಾರೆ. ಅವರು ಅಧ್ಯಯನ ಮಾಡಿ, ಈ ಹುದ್ದೆಗಳ ಅವಶ್ಯಕತೆ ಇದೆ ಎಂದು ಶಿಫಾರಸ್ಸು ಮಾಡಿದ್ದು, ಅದು ಸರ್ಕಾರಕ್ಕೆ ಬಂದಿದೆ. ಇದು ಬಂದು ಒಂದು ವರ್ಷವಾಯಿತು. ಮುಖ್ಯ ಕಾರ್ಯದರ್ಶಿಗಳ ಹಂತದಲ್ಲಿದೆ. ಇವತ್ತಿನವರೆಗೂ ಅದಕ್ಕೆ ಕ್ಲಯರೆನ್ಸ್ ಕೊಟ್ಟಿಲ್ಲ. ಏಕೆ ಕೊಟ್ಟಿಲ್ಲ ಎಂದು ಕೇಳಿದಾಗ, ರಾಜ್ಯದಲ್ಲಿರುವ ಎಲ್ಲಾ ಆಸ್ಪತ್ರೆಗಳಿಗೂ ಒಂದೇ ಸಲ ಕ್ಲಿಯರ್ ಮಾಡುತ್ತೇವೆ ಎಂದು ಹೇಳಿದ್ದಾರೆ. ಇದು ಸರಿಯಲ್ಲ. ಮಂಗಳೂರಿನಲ್ಲಿ 5 ಸಾವಿರಕ್ಕಿಂತ ಹೆಚ್ಚು ಮೇಜರ್ ಆಪರೇಷನ್‌ಗಳು ಆಗುತ್ತವೆ. ಅವು ಖಾಸಗಿ ಆಸ್ಪತ್ರೆಗಳಿಗಿಂತ ಉತ್ತಮ ರೀತಿಯಲ್ಲಿ ಕೆಲಸ ನಿರ್ವಹಣೆ ಮಾಡುತ್ತಿವೆ. ಹೊಸ ಹೊಸ ಫ್ಯಾಕಲ್ಟಿಗಳು ಬಂದಿರುವ ಹಿನ್ನೆಲೆಯಲ್ಲಿ, ನಮ್ಮ ಜಿಲ್ಲೆಯ ಪ್ರಮುಖ ಆಸ್ಪತ್ರೆಗಳಾದ ವೆನ್ ಲಾಕ್ ಮತ್ತು ಲೇಡಿ ಗೋಷನ್ ಆಸ್ಪತ್ರೆಗಳಿಗೆ 64 ಸ್ಟಾಫ್ ನರ್ಸ್‌ಗಳನ್ನು ಕೊಡುವಂಥ ಆದೇಶವನ್ನು ತಕ್ಷಣ ರಿಲೀಸ್ ಮಾಡಬೇಕು ಮತ್ತು ಇನ್ನಿತರ ಸಿಬ್ಬಂದಿಯನ್ನು ಸಹ ನೇಮಕಾತಿ ಮಾಡಬೇಕು ಎನ್ನುವ ವಿನಂತಿಯನ್ನು ಮಾಡುತ್ತಿದ್ದೇನೆ. ತಾವು ಒಂದು ಆದೇಶ ಕೊಟ್ಟರೆ ಸಾಕು.

ಶ್ರೀ ಕಾಗೋಡು ತಿಮ್ಮಪ್ಪ :— ಒಂದೊಂದು ಆಸ್ಪತ್ರೆಗೆ ಒಂದೊಂದು ತೀರ್ಮಾನ ಮಾಡಲು ಆಗುವುದಿಲ್ಲ. ಎಲ್ಲಾ ಆಸ್ಪತ್ರೆಗಳಿಗೂ ಅನ್ವಯವಾಗುವ ರೀತಿಯಲ್ಲಿ ಸಧ್ಯದಲ್ಲೇ ನಾವು ಒಂದು ತೀರ್ಮಾನವನ್ನು ತೆಗೆದುಕೊಳ್ಳುತ್ತೇವೆ. ಈಗಾಗಲೇ ಅದು ಕ್ಯಾಬಿನೆಟ್ ಮುಂದೆ ಇದೆ. ತಮ್ಮಿಂದ ಬಂದಿರುವ ವರದಿ ಪ್ರಕಾರವಾಗಿಯೇ, ಅಲ್ಲಿನ ಬೆಡ್ ಸ್ಟ್ರೆಂಥ್‌ಗೆ ಅನುಗುಣವಾಗಿ ಮಾಡುತ್ತೇವೆ.

ಪ್ರಶ್ನೆ ಸಂಖ್ಯೆ 3841